ಇ) ಈ ಸಾಲಿನಲ್ಲಿ ಮಿನಿ ವಿಧಾನ ಸೌಧವನ್ನು ನಿರ್ಮಾಣ ಮಾಡುವ ಯೋಚನೆ ಸರ್ಕಾರಕ್ಕಿದೆಯೇ?

ಹಾಗಿದ್ದಲ್ಲಿ ಯಾವಾಗ ಮಿನಿ ವಿಧಾನ ಸೌಧವನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- (ಕಂದಾಯ ಮಂತ್ರಿಗಳು)

ಅ) ಹೌದು

ಆ) ಅಂದಾಜು ಮತ್ತು ನಕ್ಷೆಯನ್ನು ಲೋಕೋಪಯೋಗಿ ಇಲಾಖೆಯಿಂದ ತಯಾರಿಸಿ ಕಳುಹಿಸಲು ಜಿಲ್ಲಾಧಿಕಾರಿ ಹಾಸನ ಇವರಿಗೆ ಸೂಚಿಸಿದೆ.

ಇ) ಹೌದು.

ಆಯ-ವ್ಯಯದಲ್ಲಿ ಅನುದಾನ ನೀಡಿದ್ದಲ್ಲಿ ಇದನ್ನು ಪರಿಗಣಿಸಲಾಗುವುದು.

ಅರಣ್ಯ ಪ್ರೇಕ್ಷಕರನ್ನು ಖಾಯಂಗೊಳಿಸುವುದು

567 (804) ಶ್ರೀ ಡಿ. ಬಿ. ಚಂದ್ರೇಗೌಡ:- (ತೀರ್ಥಹಳ್ಳಿ) ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅರಣ್ಯ ಪ್ರೇರಕರ ಸಂಖ್ಯೆ ಎಷ್ಟು?

ಆ) ಈ ಅರಣ್ಯ ಯೋಜನೆಯಡಿಯಲ್ಲಿ ಸುಮಾರು ಎಷ್ಟು ವರ್ಷಗಳಿಂದ ಅರಣ್ಯ ಪ್ರೇರಕರು ಸೇವೆ ಸಲ್ಲಿಸುತ್ತಿದ್ದಾರೆ?

ಇ) ಇವರ ಸೇವೆಯನ್ನು ಖಾಯಂಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಈ) ಇವರನ್ನು ಖಾಯಂ ಮಾಡುವಾಗ ಯಾವ ನೀತಿಯನ್ನು ಅನುಸರಿಸಲಾಗುವುದು?

ಶ್ರೀ ಈ. ಟಿ. ಶಂಭುನಾಥ್ (ರಾಜ್ಯ ಅರಣ್ಯ ಸಚಿವರು)

ಅ) 1468.

ಆ) 1984 ರಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಇ) ಅರಣ್ಯ ಪ್ರೇರಕರ ಸೇವೆಯನ್ನು ಖಾಯಂಗೊಳಿಸುವ ಯೋಜನೆ ಸರ್ಕಾರದ ಮುಂದಿಲ್ಲ.

ಈ) ಫಾರೆಸ್ಟರ್, ಫಾರೆಸ್ಟ್ ಗಾರ್ಡ್ ಹಾಗೂ ವಾಚರ್‌ಗಳ ಹುದ್ದೆಗಳನ್ನು ಭರ್ತಿ ಮಾಡುವಾಗ ಅರಣ್ಯ ಪ್ರೇರಕರ ವಿದ್ಯಾರ್ಹತೆ ಹಾಗೂ ದೈಹಿಕ ಅರ್ಹತೆಗಳನ್ನು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಅರಣ್ಯ ವಿಭಾಗದಲ್ಲಿ ನಡೆಯುತ್ತಿರುವ ಅವ್ಯವಹಾರಗಳು

568 (790) ಶ್ರೀ ಡಿ. ಬಿ. ಚಂದ್ರೇಗೌಡ:- (ತೀರ್ಥಹಳ್ಳಿ) ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಅರಣ್ಯ ವಿಭಾಗದಲ್ಲಿ 5 ವರ್ಷಕ್ಕೂ ಹೆಚ್ಚಾಗಿ ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳ ಸಂಖ್ಯೆ ಎಷ್ಟು? (ಹೆಸರು, ಹುದ್ದೆ, ವಿಬಾಗಕ್ಕೆ ಬಂದ ದಿನಾಂಕ ತಿಳಿಸುವುದು)

ಆ) ಹೊನ್ನಾವರ ಅರಣ್ಯ ವಿಭಾಗದಲ್ಲಿ ಜಿಲ್ಲಾ ಅರಣ್ಯಾಧಿಕಾರಿಗಳಿಂದ ರೇಂಜ್ ಫಾರೆಸ್ಟ್ ಅಧಿಕಾರಿಗಳವರೆಗೆ ಯಾವ ಯಾವ ಕೋಮಿಗೆ ಸೇರಿದವರಿದ್ದಾರೆ ಹಾಗೂ ಯಾವ ಯಾವ ಜಿಲ್ಲೆಯವರಿದ್ದಾರೆ (ಹೆಸರು, ಹುದ್ದೆವಾರು ವಿವರ ನೀಡುವುದು).

ಇ) ಈ ಎಲ್ಲಾ ಅರಣ್ಯ ಅಧಿಕಾರಿಗಳು ಶಾಮಿಲಾಗಿ ಪ್ರಾಮುಖ್ಯವಾದ ಅರಣ್ಯವನ್ನು ಕೊಳ್ಳೆ ಹೊಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬಗ್ಗೆ ತಪ್ಪಿತಸ್ಥ ಜಿಲ್ಲಾ ಅರಣ್ಯ ಅಧಿಕಾರಿಗಳ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮ ಏನು ?

ಉ) ಈಗಾಲಾದರೂ ಕೂಲಂಕುಷವಾಗಿ ತನಿಖೆ ನಡೆಸಿ ಸರ್ಕಾರ ಜನತೆಗೆ ಸತ್ಯಾಸತ್ಯೆಯನ್ನು ತಿಳಿಸಲು ಪ್ರಯತ್ನಿಸುವುದೇ?

ಶ್ರೀ ಈ. ಟಿ. ಶಂಬುನಾಥ:- (ಅರಣ್ಯ ರಾಜ್ಯ ಸಚಿವರು)

ಅ) ಯಾರೂ ಇರುವುದಿಲ್ಲ

	ಹೆಸರು ಮತ್ತು ಹುದ್ದೆ ಪದನಾಮ	ಯಾವ ಕೋಮಿವರು	ಯಾವ ಜಿಲ್ಲೆಯವರು
1)	ಶ್ರೀ ಕೆ.ಸುಂದರ ನಾಯಕ್ ಭಾ.ಅ.ಸೇ., ಉಪ ಅರಣ್ಯ ಸಂರಕ್ಷಣಾಧಿಕಾರಿ, ಹೊನ್ನಾವರ.	ಮರಾಠಿ (ಪ.ಪಂ)	ದಕ್ಷಿಣ ಕನ್ನಡ
2)	ಶ್ರೀ ಬಿ. ಗೋಪಾಲ ನಾಯಕ್ ಭಾ.ಅ.ಸೇ., ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಕುಮಟ.	ಮರಾಠಿ (ಪ.ಪಂ)	ದಕ್ಷಿಣ ಕನ್ನಡ
3)	ಶ್ರೀ ಕೆ.ಎನ್.ರಾವ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಭಟ್ಕಳ	ಗಾಣಿಗ	ದಕ್ಷಿಣ ಕನ್ನಡ
4)	ಶ್ರೀ ಐ. ಕೃಷ್ಣ ನಾಯಕ್, ವಲಯ ಅರಣ್ಯಾಧಿಕಾರಿ, ಹೊನ್ನಾವರ.	ಮರಾಠಿ	ದಕ್ಷಿಣ ಕನ್ನಡ
5)	ಶ್ರೀ ಎನ್. ಎಲ್ ರಾಘವ, ವಲಯ ಅರಣ್ಯಾಧಿಕಾರಿ ಕುಮಟ.	ಒಕ್ಕಲಿಗ	ಬೆಂಗಳೂರು
6)	ಶ್ರೀ ಬಿ.ಹೆಚ್.ನಾಯಕ್ ವಲಯ ಅರಣ್ಯಾಧಿಕಾರಿ, ಗೇರುಸೊಪ್ಪಾ	ನಾಮಧಾರಿ	ಉತ್ತರ ಕನ್ನಡ
7)	ಶ್ರೀ ಬಿ.ಆರ್.ಭಾಂಗಿ, ವಲಯ ಅರಣ್ಯಾಧಿಕಾರಿ ಹಿರೇಗುತ್ತಿ.	ಲಿಂಗಾಯಿತ್	ಬೆಳಗಾವಿ
8)	ಶ್ರೀ ನಾಗರಾಜ ಜಿ. ನಾಯಕ್ ವಲಯ ಅರಣ್ಯಾಧಿಕಾರಿ, ಭಟ್ಕಳ.	ನಾಡವರು	ಉತ್ತರ ಕನ್ನಡ

9)	ಶ್ರೀ ಎನ್. ಜಿ. ಹಿತ್ತಲಮಕ್ಕಿ ವಲಯ ಅರಣ್ಯಾಧಿಕಾರಿ, ಕತಗಾಲ್.	ನಾಡವರು	ಉತ್ತರ ಕನ್ನಡ
10)	ಶ್ರೀ ಎಂ.ಜಿ. ನಾಯಕ್ ವಲಯ ಅರಣ್ಯಾಧಿಕಾರಿ, ಮಂಕಿ.	ನಾಮಧಾರಿ	ಉತ್ತರ ಕನ್ನಡ
11)	ಶ್ರೀ ಬಿ.ಕೆ ಶಂಕರಪ್ಪ, ವಲಯ ಅರಣ್ಯಾಧಿಕಾರಿ, ಸರ್ಕಾರಿ ಮರ ಸಂಗ್ರಹಾಲಯ, ಕತಗಾಲ್.	ರೆಡ್ಡಿ	ಬೆಂಗಳೂರು
12)	ಶ್ರೀ ಯು.ಡಿ. ಮಹಾಲಿ, ವಲಯ ಅರಣ್ಯಾಧಿಕಾರಿ, ಸರ್ಕಾರಿ ಮರ ಸಂಗ್ರಹಾಲಯ, ಕಾಸರಗೋಡ್.	ನಾಪಿಕ (ಪ.ಜಾ)	ಉತ್ತರಕನ್ನಡ
13)	ಶ್ರೀ ಎಂ. ಪಿ. ಭಟ್, ವಲಯ ಅರಣ್ಯಾಧಿಕಾರಿ, ಸರ್ವೆ ಡ್ಯೂಟಿ, ಹೊನ್ನಾವರ.	ಹವೀಕ	ಉತ್ತರ ಕನ್ನಡ
14)	ಶ್ರೀ ಎ. ಎಸ್. ಫರ್ನಾಂಡಿಸ್, ವಲಯ ಅರಣ್ಯಾಧಿಕಾರಿ, ಸರ್ವೆ ಡ್ಯೂಟಿ ಹೊನ್ನಾವರ.	ಕ್ರಿಶ್ಚಿಯನ್	ಉತ್ತರ ಕನ್ನಡ
15)	ಶ್ರೀ ಹೆಚ್.ಕೆ. ಶ್ರೀನಿವಾಸ್, ವಲಯ ಅರಣ್ಯಾಧಿಕಾರಿ, ಸೈಕ್ ಫೋರ್ಸ್, ಮಿರಜಾನ್.	ಒಕ್ಕಲಿಗ ಗೌಡ	ಮಡಿಕೇರಿ
16)	ಶ್ರೀ ಜಿ. ಎಸ್. ನಾಯಕ್, ವಲಯ ಅರಣ್ಯ ಅಧಿಕಾರಿ, ಹೊಸಕಂಬಿ ಡಿಪೋ.	ನಾಮಧಾರಿ	ಉತ್ತರ ಕನ್ನಡ
17)	ಶ್ರೀ ಆರ್. ರಂಗಸ್ವಾಮಿ, ವಲಯ ಅರಣ್ಯಾಧಿಕಾರಿ, ಪ್ಲಾಂಟೇಶನ್ ಪ್ರಾಜೆಕ್ಟ್, ಗೇರುಸೊಪ್ಪ.	ನಾಯಕ್ (ಪ.ಜಾ)	ಮೈಸೂರು

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.